# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಕ್ಷಿಣ ಕನ್ನಡ ಮತ್ತು ಹಾಸನ ಜಿಲ್ಲೆಗಳ ತಾಲ್ಲೂಕು ಪಂಚಾಯತ್‌ಗಳ ವ್ಯಾಪ್ತಿಯ ಕೃಷಿ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳ ನೌಕರರ ವೇತನ ವೆಚ್ಚಕ್ಕಾಗಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಕಡತ ಸಂಖ್ಯೆ: ಆಇ 110 ವೆಚ್ಚ 4/2016 ಮತ್ತು ಆಇ 121 ವೆಚ್ಚ 5/2016

**ಪ್ರಸ್ತಾವನೆ:**

ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ಕೃಷಿ ಇಲಾಖೆಯ ಮತ್ತು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ಮತ್ತು ಅರಸೀಕೆರೆ ತಾಲ್ಲೂಕು ಪಂಚಾಯತ್‌ಗಳ ವ್ಯಾಪ್ತಿಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ವೆಚ್ಚಕ್ಕಾಗಿ ಪ್ರಧಾನ ಲೆಕ್ಕ ಶೀರ್ಷಿಕೆ 2435 ಮತ್ತು 2210 (ಯೋಜನೇತರ) ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳಡಿ ಒಟ್ಟು ರೂ.21.98ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2515-00-197-1-10-300 (ಯೋಜನೇತರ) ಅಡಿ ಲಭ್ಯವಿರುವ ಅನುದಾನದಿಂದ ಬಿಡುಗಡೆಗೊಳಿಸುವಂತೆ ಆದೇಶಿಸಲಾಗಿದೆ. 2015-16ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2515-00-197-1-10-300 (ಯೋಜನೇತರ)ಅಡಿ ತೆರವಾದ ಹುದ್ದೆಗಳಿಗೆ ಕಾರ್ಯಕ್ರಮದಡಿ ರೂ.17500.00ಲಕ್ಷಗಳ ಅನುದಾನದಲ್ಲಿ ಲಭ್ಯವಿರುವ ಅನುದಾನದಿಂದ ರೂ.21.98ಲಕ್ಷಗಳನ್ನು ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 59 ವೆಚ್ಚ 6/2015 ದಿನಾಂಕ:27ನೇ ಫೆಬ್ರವರಿ 2016

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕೆಳಕಂಡಂತೆ ಕಾಲಂ 2ರ ತಾಲ್ಲೂಕು ಪಂಚಾಯತ್‌ಗಳಿಗೆ ಕಾಲಂ 4ರ ಕಾರ್ಯಕ್ರಮಗಳಡಿ ವೇತನ ವೆಚ್ಚಕ್ಕಾಗಿ ಕಾಲಂ 5ರನ್ವಯ ರೂ.21.98ಲಕ್ಷ (ರೂಪಾಯಿ ಇಪ್ಪತ್ತೊಂದು ಲಕ್ಷದ ತೊಂಬತ್ತೆಂಟು ಸಾವಿರಗಳು ಮಾತ್ರ) ಗಳನ್ನು ಕಾಲಂ 3 ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಗೊಳಿಸಲಾಗಿದೆ. ಬಿಡುಗಡೆಗೊಳಿಸಲಾಗಿರುವ ಈ ಅನುದಾನವನ್ನು ತಾಲ್ಲೂಕು ಪಂಚಾಯತ್‌ನ ನಿಧಿ-2ಕ್ಕೆ ಜಮೆ ಮಾಡಿಕೊಂಡು ಕಾಲಂ 5ರಲ್ಲಿನ ಕಾರ್ಯಕ್ರಮದಡಿ ವೆಚ್ಚವನ್ನು ಮಾಡಲು ಮತ್ತು ಲೆಕ್ಕೀಕರಿಸುವಂತೆ ತಿಳಿಸಲಾಗಿದೆ.

| ಕ್ರ. ಸಂ. | ತಾಲ್ಲೂಕು ಪಂಚಾಯತ್ | ಬಿಡುಗಡೆಗೊಳಿಸಿದ ಲೆಕ್ಕ ಶೀರ್ಷಿಕೆ | ಲೆಕ್ಕೀಕರಿಸಬೇಕಾದ ಮತ್ತು ವೆಚ್ಚ ಮಾಡಬೇಕಾದ ಯೋಜನೇತರ ಲೆಕ್ಕ ಶೀರ್ಷಿಕೆ | ಬಿಡುಗಡೆಗೊಳಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 1 | ದಕ್ಷಿಣ ಕನ್ನಡ ಜಿಲ್ಲೆ:<br>ತಾ.ಪಂ. ಮಂಗಳೂರು | 2515-00-197-1-10-300(NP) | 2435-00-101-0-61(ಯೋಜನೇತರ) | 11.98 |
| 2 | ಹಾಸನ ಜಿಲ್ಲೆ<br>ತಾ.ಪಂ. ಚನ್ನರಾಯಪಟ್ಟಣ<br>ತಾ.ಪಂ. ಅರಸೀಕೆರೆ | 2515-00-197-1-10-300(NP) | 2210-00-104-0-61(ಯೋಜನೇತರ) | 5.00<br>5.00 |
| | | **ಒಟ್ಟು** | | **21.98** |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಮುರಳೀಧರ 27-2-16

**(ಕೆ. ಮುರಳೀಧರ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ವೆಚ್ಚ 5)

1. ಮಹಾಲೇಖಪಾಲರು (ಎ&ಇ), ಲೆಕ್ಕ ಪರಿಶೋಧನೆ 1&2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಕೃಷಿ ಮತ್ತು ಆರೋಗ್ಯ &ಕುಟುಂಬ ಕಲ್ಯಾಣ ಇಲಾಖೆ
3. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು/ಹಾಸನ
4. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ಜಿಲ್ಲಾ ಖಜಾನೆ ಅಧಿಕಾರಿಗಳು, ಮೈಸೂರು
6. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಮೈಸೂರು/ಚನ್ನರಾಯಪಟ್ಟಣ/ಅರಸೀಕೆರೆ
7. ಉಪ ಖಜಾನೆ ಅಧಿಕಾರಿಗಳು, ಚನ್ನರಾಯಪಟ್ಟಣ
8. ಆರ್ಥಿಕ ಇಲಾಖೆ, ವೆಚ್ಚ 4 ಮತ್ತು 5 ಶಾಖೆಗಳ ಕಡತಗಳಿಗೆ
9. ರಕ್ಷಾ ಕಡತಕ್ಕೆ
10. ಹೆಚ್ಚುವರಿ ಪ್ರತಿ